# ಕರ್ನಾಟಕ ಸರ್ಕಾರ
## (ಕೃಷಿ ಇಲಾಖೆ)

ಸಂಖ್ಯೆ: ಸಾಗೊವಿ/ಕೃವಸಲು/2014-15

ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ: 26.06.2014.

## ಸುತ್ತೋಲೆ

ವಿಷಯ : ಕೃಷಿ ಪರಿಕರಗಳ ಸರಬರಾಜು ಮತ್ತು ಪೂರೈಕೆ ವ್ಯವಸ್ಥೆ ಕುರಿತು.

ಉಲ್ಲೇಖ: ದಿನಾಂಕ: 19.06.2014 ರಂದು ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಪರಿಕರ ಸರಬರಾಜುದಾರರ ಪರಿಶೀಲನಾ ಸಭೆಯ ನಡವಳಿಗಳು.

~~~~~~~~~~~~~~~~~~~~

ರಾಜ್ಯದಲ್ಲಿ ಕೃಷಿ ಪರಿಕರಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುವ ಸಲುವಾಗಿ ದಿನಾಂಕ: 19.06.2014 ರಂದು ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕೃಷಿ ಪರಿಕರಗಳ ಅನುಮೋದಿತ ಸರಬರಾಜುದಾರರ ಸಭೆಯನ್ನು ನಡೆಸಲಾಯಿತು. ಭೂಚೇತನದಂತಹ ಮುಖ್ಯ ಕಾರ್ಯಕ್ರಮಗಳಿಗೆ ಕೃಷಿ ಪರಿಕರಗಳಾದ ಜೈವಿಕ ಗೊಬ್ಬರಗಳು, ಲಘುಪೋಷಕಾಂಶಗಳು,ಹಸಿರೆಲೆ ಗೊಬ್ಬರ ಬೀಜಗಳು ಮತ್ತು ಸಾವಯವ ಗೊಬ್ಬರಗಳ ಬೇಡಿಕೆ, ಸರಬರಾಜು, ದಾಸ್ತಾನು ಮತ್ತು ಪೂರೈಕೆ ವ್ಯವಸ್ಥೆಯ ಕ್ಷೇತ್ರ ಮಟ್ಟದಲ್ಲಿನ ಸಮಸ್ಯೆಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು. ಹಂಗಾಮಿನ ಬಿತ್ತನೆಗೆ ಅನುಕೂಲವಾಗುವಂತೆ ಕೃಷಿ ಪರಿಕರಗಳು ಸಕಾಲದಲ್ಲಿ ರೈತರಿಗೆ ದೊರೆಯುವಂತೆ ಮಾಡುವುದಕ್ಕಾಗಿ ಅನುಷ್ಠಾನಾಧಿಕಾರಿಗಳು ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೃಷಿ ಪರಿಕರಗಳ ವ್ಯವಸ್ಥೆ ಮಾಡತಕ್ಕದ್ದು.

- ಹಂಗಾಮಿನ ಬೇಡಿಕೆಗೆ ಅನುಗುಣವಾದ ಕೃಷಿ ಪರಿಕರಗಳ ಪ್ರಮಾಣವನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಆಯಾ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ನಿರ್ಧರಿಸುವುದು.
- ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ರೈತ ಸಂಪರ್ಕ ಕೇಂದ್ರ ಮತ್ತು ತಾಲ್ಲೂಕು ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಿದ ನಂತರ ಯಾವ ಸ್ಥಳದಲ್ಲಿ ಪರಿಕರದ ದಾಸ್ತಾನು ಪಡೆಯಬೇಕು ಹಾಗೂ ಪರಿಕರ ಸರಬರಾಜು ಮಾಡಲು ಕಾಲಬದ್ಧ ವೇಳಾಪಟ್ಟಿಯನ್ನು ನಿಖರವಾಗಿ ನಮೂದಿಸಿ ಬೇಡಿಕೆ ಪತ್ರವನ್ನು ಸರಬರಾಜುದಾರರಿಗೆ ಕಳುಹಿಸುವುದು.
- ಯಾವುದೇ ಕೃಷಿ ಪರಿಕರವನ್ನು ಸರಬರಾಜು ಪಡೆಯಲು ನಿಖರವಾಗಿ ಬಳಕೆಗೆ ಬೇಕಾಗುವ 15-20ದಿವಸಗಳು ಮುಂಚಿತವಾಗಿ ಬೇಡಿಕೆಯನ್ನು ಸಲ್ಲಿಸುವುದು.
- ಸರಬರಾಜು ಪಡೆಯಲಾದ ಕೃಷಿ ಪರಿಕರಗಳಿಗೆ ಸಂಬಂಧಿಸಿದ ಪೂರೈಕೆದಾರರಿಗೆ ರೈತರ ವಂತಿಕೆಯನ್ನು ಪರಿಕರ ಮಾರಾಟವಾದ 10 ದಿವಸಗಳೊಳಗಾಗಿ ಮತ್ತು ಕೇಂದ್ರ ಕಛೇರಿಯಿಂದ ಅನುದಾನ ಬಿಡುಗಡೆಯಾದ 15 ದಿವಸಗಳೊಳಗಾಗಿ ಸರ್ಕಾರದ ಸಹಾಯಧನವನ್ನು ಸರಬರಾಜು ಸಂಸ್ಥೆಗೆ ಪಾವತಿಸುವುದು.
- ಇಲಾಖೆಯಿಂದ ನೀಡಲಾಗಿರುವ ಗುರುತು ಪಟ್ಟಿ (Label) ವಿವರಗಳನ್ನು ಪ್ಯಾಕಿಂಗ್ /ಚೀಲದ ಮೇಲೆ ಕನ್ನಡದಲ್ಲಿ ಮುದ್ರಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

ಮೇಲೆ ತಿಳಿಸಲಾಗಿರುವ ಎಲ್ಲಾ ಅಂಶಗಳನ್ನು ಅನುಷ್ಠಾನಾಧಿಕಾರಿಗಳು ತಪ್ಪದೇ ಪಾಲಿಸುವಂತೆ ಸೂಚಿಸಿದೆ. ಒಂದುವೇಳೆ ಈ ಮಾರ್ಗಸೂಚಿಯನ್ನು ಉಲ್ಲಂಘನೆ ಮಾಡಿದಲ್ಲಿ ಸಂಬಂಧಿಸಿದವರ ಮೇಲೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ (CCA Rules) ಪ್ರಕಾರ ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಸಿದೆ.

ಕರಡು ಕೃಷಿ ನಿರ್ದೇಶಕರಿಂದ ಅನುಮೋದಿಸಿದೆ.

ಕೃಷಿ ನಿರ್ದೇಶಕರ ಪರವಾಗಿ

ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

E:\Circulars 2010-11.doc
~~~~~~~~~~~~~~~~~~~~